೯೫. ಸೈಕಲ್ ರಿಪೇರಿ.
೯೬. ಕಟ್ಟಡದ ಕೆಲಸ.

ಹೆಚ್ಚಿನ ವಿವರಗಳಿಗೆ :

ಆಯಾ ಜಿಲ್ಲಾ ಕೇಂದ್ರಗಳಲ್ಲಿರುವ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಯನ್ನು ಸಂಪರ್ಕಿಸಿ.

ಮೈಸೂರು ಆಸಿಟೇಟ್ ಕಂಪನಿಯಲ್ಲಿ ಬಂಡವಾಳ ಹೂಡಿಕೆ

೫೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಕೈಗಾರಿಕೆ, ವಾಣಿಜ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ (ಮೈಷುಗರ್) ಕಂಪನಿ ಹೂಡಿರುವ ಬಂಡವಾಳ ಹಾಗೂ ಕೈಗಾರಿಕಾ ಆಸಕ್ತಿಗಳೇನು ?

ಆ) ಮೈಸೂರು ಆಸಿಟೇಟ್ ಕಂಪನಿಗೆ ಒದಗಿಸುತ್ತಿರುವ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣವೆಷ್ಟು? ಮೈಷುಗರ್ ಕಂಪನಿಯು ಉತ್ಪಾದಿಸುವ ಸ್ಪಿರಿಟ್‌ನ ಪ್ರಮಾಣವೆಷ್ಟು?

ಇ) ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಬಹಿರಂಗ ಮಾರುಕಟ್ಟೆಯಲ್ಲಿ ಸ್ಪಿರಿಟ್ ಖರೀದಿ ನಡೆಸಿದೆಯೇ, ಹಾಗಾದರೆ ಪ್ರತಿ ಲೀಟರ್‌ಗೆ ನೀಡುತ್ತಿರುವ ಹಣವೆಷ್ಟು ?

ಶ್ರೀ ಎಸ್. ಎಂ. ಯಾಹ್ಯ (ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು).—

ಅ) ಮೈಷುಗರ್ ಸಂಸ್ಥೆಯು ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಸಂಸ್ಥೆಯಲ್ಲಿ ೩೦ ಲಕ್ಷ ರೂ. ಗಳನ್ನು ಮೂಲ ಬಂಡವಾಳವಾಗಿ ತೊಡಗಿಸಿದೆ. ಮೈಸೂರು ಆಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯು, ಮೈಸೂರು ಷುಗರ್ ಕಂಪನಿಯು ತಯಾರಿಸುವ ಆಸಿಟಿಕ್ ಆಸಿಡನ್ನು ಕೊಳ್ಳುವ ಪ್ರಮುಖ ಕಂಪನಿಗಳಲ್ಲಿ ಒಂದಾಗಿದೆ.

ಆ) ಮೈಸೂರು ಷುಗರ್ ಕಂಪನಿ ೧೯೫೯ರಲ್ಲಿ ಉತ್ಪಾದಿಸಿದ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣ ಹಾಗೂ ಮೈಸೂರು ಆಸಿಟೇಟ್ ಕಂಪನಿಗೆ ಸರಬರಾಜು ಮಾಡಿದ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣ ಈ ಕೆಳಗಿನಂತಿವೆ.

ವರ್ಷ	ಎಂ.ಎ.ಸಿ.ಸಿ.ಗೆ ಸರಬರಾಜು ಮಾಡಿದ ಪ್ರಮಾಣ	ಮೈಷುಗರ್ ಕಂಪನಿಯು ಉತ್ಪಾದಿಸಿದ ಪ್ರಮಾಣ
ಏಪ್ರಿಲ್ ೧೯೫೯ ರಿಂದ ಮಾರ್ಚ್ ೧೯೬೦ರವರೆಗೆ	೨,೩೯,೪೨೦ಲೀ	೬೧,೩೪,೪೨೪ ಲೀಟರ್

ಇ) ಮೈಸೂರು ಆಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯು ಬಹಿರಂಗ ಮಾರುಕಟ್ಟೆಯಿಂದ ಸ್ಪಿರಿಟನ್ನು ಖರೀದಿಸಿಲ್ಲ.

ಗ್ರಾಮಾಂತರ ವಿದ್ಯುದೀಕರಣ ಯೋಜನೆ

೧೦೫. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಜಿಲ್ಲೆಯ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಮಂಜೂರಾದ ಒಟ್ಟು ಹಣದ ಪ್ರಮಾಣವೆಷ್ಟು ?

ಆ) ಇದರಲ್ಲಿ ಯಾವ ಯಾವ ಗ್ರಾಮಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಹಾಗೂ ಹಣ ಪಡೆದ ಫಲಾನುಭವಿಗಳೆಷ್ಟು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು).—

ಅ) ಯೋಜನೆ ಪ್ರಾರಂಭದಿಂದ ಮಾರ್ಚ್ ೧೯೬೦ರ ಅಂತ್ಯದವರೆಗೆ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳಿಗೆ